# IN THE COURT OF CIVIL JUDGE AND JMFC, KALAGHATAGI.

O.S.No. 38/2025

Examination in chief by PW-1

Duly Sworn before me on 07.08.2026.

| | |
|---|---|
| Name of witness | Ranjeeta Baregal |
| Father's Name | Gurunath |
| Age | 21 Years |
| Designation | Housewife |
| Place | Dummawad |

**Further Examination in chief by : Sri. MSD**

I have produced the following set of the documents that are herewith marked as exhibits, correspondingly:-

| Sl.No. | Description of Document | Exhibits |
|---|---|---|
| 1 | Computerized copy of RTC extracts of Sy. No. 47/2B+3A | **Ex.P-1** |
| 2 | Office copy of legal notice dtd 06.12.2024 | **Ex.P-2** |
| 3 | 3 Postal receipts | **Ex.P-3** |
| 4 | 2 Postal acknowledgment | **Ex.P-4 & 5** |
| 5 | Original school certificate of PW1 | **Ex.P-6** |
| 6 | Attested copy of Aadhar cards bearing Nos.0090, 4408, 3273, 1302, 0222, 3608 | **Ex.P-7 to 12** |
| 7 | Computerized copy of death certificate dtd 12.08.2019 | **Ex.P-13** |
| 8 | Computerized copy of death certificate dtd 29.08.2011 | **Ex.P-14** |

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಮಾನ್ಯ ಎ.ಜಿ.ಪಿ ರವರಿಂದ**

1. ನಾನು 9 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸ್ವಂತ ಊರು ಸಂಗೇದೇವರಕೊಪ್ಪ. ದುಮ್ಮವಾಡ ದಲ್ಲಿರುವ ನನ್ನ ಗಂಡನ ಮನೆಯಲ್ಲಿ ಇದ್ದೇನೆ. ನನ್ನ ಹೊಲದ ವಾಟ್ನಿ ಆಗಬೇಕಾಗಿತ್ತು ಆದ ಕಾರಣ ಮಗಳಾದ ನನ್ನ ಹೆಸರನ್ನು ಹೊಲದ ಉತಾರದಲ್ಲಿ ಸೇರಿಸಬೇಕೆಂದು ಕೋರಿ ಈ ದಾವೆಯನ್ನು ಹೂಡಿದ್ದೇನೆ. ನನ್ನ ಪೋಷಕರ ಪೂರ್ಣ ಹೆಸರು ಲಕ್ಷ್ಮವ್ವ ಶಿವಪುತ್ರಪ್ಪ ಕುಡಿಕೇರಿ ಮತ್ತು ಶಿವಪುತ್ರಪ್ಪ ಸಂಗಪ್ಪ ಕುಡಿಕೇರಿ ಎಂದು ಇದೆ. ನನ್ನ ತಾಯಿ ದಿಃ 26.08.2011 ರಂದು ಪೋತಿಯಾದರು. ನನ್ನ ತಂದೆ ದಿಃ 07.08.2019 ರಂದು ಪೋತಿಯಾದರು. ಗಂಗವ್ವ ಸಂಗಪ್ಪ ಕುಡಿಕೇರಿಯವರು ನನ್ನ ಅಜ್ಜಿ. ಚಿಮಣಿ ಫಕೀರವ್ವ ಕುಡಿಕೇರಿಯವರು ನನ್ನ ಸೋದರ ಅತ್ತೆಯಾಗಬೇಕು. ಕುಡಿಕೇರಿ ಮಲಕಪ್ಪ ತಂದೆ ಸಂಗಪ್ಪ ರವರು ನನ್ನ ದೊಡ್ಡಪ್ಪ ಆಗಬೇಕು. ಚನ್ನವ್ವ ಚನ್ನಬಸಪ್ಪ ಕುಡಿಕೇರಿಯವರು ನನ್ನ ದೊಡ್ಡಮ್ಮ ಆಗಬೇಕು. ಚನ್ನಬಸಪ್ಪ ಕುಡಿಕೇರಿ ರವರು ಸಹ ನನ್ನ ದೊಡ್ಡಪ್ಪ ಆಗಬೇಕು.

2. ನನ್ನ ಪೋಷಕರಿಗೆ ನಾನು ಒಬ್ಬಳೇ ಮಗಳು. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಸದರಿ ಜಮೀನಿನ ಉತಾರವು 2023 ರಲ್ಲಿ ನೀಡಲಾಗಿದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನನ್ನನ್ನು ಹೊರತುಪಡಿಸಿ ನನ್ನ ಪೋಷಕರಿಗೆ ಬೇರೆ ಮಕ್ಕಳು ಇಲ್ಲ. ನಾನು ನನ್ನ ಪೋಷಕರಿಗೆ ಒಬ್ಬಳೇ ಮಗಳು ಎಂದು ಸಾಬೀತುಪಡಿಸಲು ನ್ಯಾಯಾಲಯಕ್ಕೆ ಈ ದಾವೆಯಲ್ಲಿ ನನ್ನ ಶಾಲಾ ಪ್ರಮಾಣ ಪತ್ರ ಮತ್ತು ಆಧಾರ ಕಾರ್ಡನ್ನು ಸಲ್ಲಿಸಿದ್ದೇನೆ. ಸಾಕ್ಷಿಗೆ ನಿಪಿ-6 ನ್ನು ತೋರಿಸಲಾಗಿ ಅದರಲ್ಲಿ ನಿಮ್ಮ ತಂದೆ ಮತ್ತು ತಾಯಿಯ ಹೆಸರು ಪ್ರತ್ಯೇಕವಾಗಿ ಇಲ್ಲ ಎಂದರೆ ಸಾಕ್ಷಿಯು ತನ್ನ ತಂದೆಯ ಹೆಸರು ಅಷ್ಟೇ ಇದೆ ಎಂದು ನುಡಿಯುತ್ತಾರೆ. ನಾನು ಶಾಲಾ ಮತ್ತು ಆಧಾರ ಕಾರ್ಡನ್ನು ಹೊರತುಪಡಿಸಿ ನನ್ನ ಪೋಷಕರಿಗೆ ನಾನು ಒಬ್ಬಳೇ ಮಗಳೆಂದು ಸಾಬೀತುಪಡಿಸಲು ಬೇರೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಿಮ್ಮ ಪೋಷಕರು ಪೋತಿಯಾದ ಕೂಡಲೇ ನೀವು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿ ವಾರಸಾ ಪ್ರಮಾಣ ಪತ್ರವನ್ನು ಪಡೆಯಬಹುದಿತ್ತು ಎಂದರೆ ಸಾಕ್ಷಿಯು ಅಂದು ತನಗೆ ಇದರ ಬಗ್ಗೆ ತಿಳುವಳಿಕೆ ಇರಲಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಪೋಷಕರಿಗೆ ಒಬ್ಬಳೇ ಮಗಳೆಂದು ಘೋಷಣೆ ಮಾಡಿ ಯಾವುದೇ ಪತ್ರಿಕಾ ಪ್ರಕಟಣೆಯನ್ನು ನೀಡಿಲ್ಲ. ನನ್ನ ಪೋಷಕರಿಗೆ ನನ್ನನ್ನು ಹೊರತುಪಡಿಸಿ ಬೇರೆ ಮಕ್ಕಳು ಇದ್ದರೂ ಸಹ ಅದನ್ನು ಮರೆಮಾಚಿ ನಾನು ಒಬ್ಬಳೇ ಮಗಳೆಂದು ಹೇಳಿ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಸರಕಾರದ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

3. ಪ್ರಸ್ತುತ ಇರುವ ಜಮೀನಿನ ಉತಾರದಲ್ಲಿ ನಿಪಿ-1 ರಲ್ಲಿ ನಮೂದು ಇರುವ ವಾರಸುದಾರರನ್ನು ಹೊರತುಪಡಿಸಿ ಬೇರೆ ವಾರಸುದಾರರ ಹೆಸರುಗಳು ನಮೂದು ಇರುವ ಕಾರಣ ಸದರಿ ಪ್ರಸ್ತುತ ಉತಾರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಹೇಳಿದ ಹಾಗೇ ಯಾವುದೇ ಕಾರಣಗಳು ಉದ್ಭವಿಸಿಲ್ಲ ಕಾರಣವನ್ನು ಸೃಷ್ಟಿ ಮಾಡಿ ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**